## ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ ಮುಂಡಗೋಡ.

ಪಿ.ಸಿ. ಆರ್ ನಂಃ 192/2025

ಸಿ ಡಬ್ಲುಃ 01

| | |
|---|---|
| ಸಾಕ್ಷಿದಾರರ ಹೆಸರು | ರತ್ನಕ್ಕ ನಲಗೆ |
| ಗಂಡನ ಹೆಸರು | ಪುಂಡಲೀಕ್ |
| ವಯಸ್ಸು | 40 ವರ್ಷ |
| ಉದ್ಯೋಗ | ಕೂಲಿ ಕೆಲಸ |
| ವಾಸ್ತವ್ಯ | ಉಗ್ಗಿನಕೇರಿ, ತಾಲೂಕು ಮುಂಡಗೋಡ. |

ಸಾಕ್ಷಿಯನ್ನು ದಿನಾಂಕ **03.10.2025** ರಂದು ಕರೆಸಲಾಯಿತು ಮತ್ತು ಪ್ರಮಾಣ ವಚನ ಮಾಡಿಸಲಾಯಿತು.

**ಸ್ವಪ್ರಮಾಣೀಕೃತ ಹೇಳಿಕೆಃ**

ನಾನು ಹೊಲದಲ್ಲಿ ಗೊಂಜಾಳವನ್ನು ಹಾಕಿದ್ದು, ಅವು 15 ದಿನಗಳ ಬೆಳೆ ಇದ್ದಾಗ, ಆರೋಪಿಯು ನಮ್ಮ ಹೊಲದಲ್ಲಿ ಟ್ರಾಕ್ಟರ್ ನ್ನು ಚಲಾಯಿಸಿ ಬೆಳೆಗಳನ್ನು ಹಾಳು ಮಾಡಿರುತ್ತಾನೆ. ಸದರಿ ಘಟನೆಯು ಸುಮಾರು 4 ತಿಂಗಳ ಹಿಂದೆ ಆಗಿರುತ್ತದೆ. ಆರೋಪಿಗೆ ಹೊಲದಲ್ಲಿ ಟ್ರಾಕ್ಟರ್ ನ್ನು ಚಲಾಯಿಸಬೇಡ ಎಂದು ಹೇಳಿದಾಗ, ತಾನು ಚಲಾಯಿಸುವವನೇ ಎಂದು ಹೇಳಿದ್ದು, ನಾನು ಎದುರುಗಡೆ ನಿಂತರೂ ಸಹಿತ, ತಾನು ಟ್ರಾಕ್ಟರ್ ನ್ನು ಚಲಾಯಿಸುತ್ತೇನೆ ಎಂದು ಹೇಳಿರುತ್ತಾನೆ. ಆರೋಪಿಯು ಅವಾಚ್ಯ ಶಬ್ದಗಳಿಂದ ನಿಂದಿಸಿರುತ್ತಾನೆ. ನಾನು ಘಟನೆಯ ಕುರಿತು ದೂರನ್ನು ದಾಖಲು ಮಾಡಲು ಹೋದಾಗ, ಮೊದಲಿಗೆ ನನ್ನ ದೂರನ್ನು ಸ್ವೀಕರಿಸಿದ್ದು ಇರುವುದಿಲ್ಲ. ನಂತರ ನಾನು ಕಾರವಾರಕ್ಕೆ ಹೋಗಿ, ಜಿಲ್ಲಾಧಿಕಾರಿಯವರನ್ನು ಭೇಟಿ ಮಾಡಿ, ಅವರಿಗೆ ಮನವಿ ಮಾಡಿದಾಗ, ಅವರು ಆಗತ್ಯ ಕ್ರಮವನ್ನು ಕೈಗೊಳ್ಳುವಂತೆ ಸಂಬಂಧಪಟ್ಟ ಪೋಲಿಸರಿಗೆ ನಿರ್ದೇಶನ ನೀಡುವುದಾಗಿ ಹೇಳಿದ್ದು, ಆ ಪ್ರಕಾರ ನಾನು ಠಾಣೆಗೆ ಹೋಗಿದ್ದು, ಆಗ ನನ್ನ ದೂರನ್ನು ಸ್ವೀಕರಿಸಿದರು. ಪೋಲಿಸರು ಸೂಕ್ತ ತನಿಖೆಯನ್ನು ಮಾಡದೇ ಇದ್ದ ಕಾರಣ, ನಾನು ಆರೋಪಿಯ ವಿರುದ್ಧ ಈ ದೂರನ್ನು ದಾಖಲು ಮಾಡಿರುತ್ತೇನೆ.

ನಾನು ಎಸ್.ಪಿ ರವರಿಗೆ ಬರೆದ ಪತ್ರವನ್ನು ನೋಡಿ ಗುರುತಿಸುತ್ತೇನೆ, ಅದನ್ನು **ನಿಪಿ.1** ಎಂದು ಗುರುತಿಸಲಾಯಿತು. ನಾನು ಜಿಲ್ಲಾಧಿಕಾರಿಯವರಿಗೆ ಬರೆದ ಪತ್ರವನ್ನು ನೋಡಿ ಗುರುತಿಸುತ್ತೇನೆ, ಅದನ್ನು **ನಿಪಿ.2** ಎಂದು ಗುರುತಿಸಲಾಯಿತು. ಪೋಲಿಸ್ ನಿರೀಕ್ಷಕರು ಮುಂಡಗೋಡ ಪೋಲಿಸ್ ಇವರು ನೀಡಿದ ಹಿಂಬರಹವನ್ನು ನೋಡಿ ಗುರುತಿಸುತ್ತೇನೆ, ಅದನ್ನು **ನಿಪಿ.3** ಎಂದು ಗುರುತಿಸಲಾಯಿತು.

**(ಈ ಹಂತದಲ್ಲಿ ಮುಂದುವರದ ಸ್ವಪ್ರಮಾಣೀಕೃತ ಹೇಳಿಕೆಗೆ ವಕೀಲರು ಸಮಯವಕಾಶ ಕೇಳಿದ್ದು ಸಮಯವಕಾಶ ನೀಡಲಾಯಿತು )**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತಗೊಳಿಸಲಾಯಿತು.)

ಓ ಹೇ ಕೇ ಸರಿ ಇದೆ.

Sd/-

**ಪ್ರ ದ ನ್ಯಾದಂ ಮುಂಡಗೋಡ.**